# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 997
2. ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸುವ ದಿನಾಂಕ : 25.07.2024
4. ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
|---|---|---|
| ಅ) | ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಮಹಾನದಿ-ಗೋದಾವರಿ-ಕೃಷ್ಣಾ-ಕಾವೇರಿ-ಪೆನ್ನಾರ್ ನದಿ ಜೋಡಣೆ ಯೋಜನೆಯು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| ಆ) | ಬಂದಿದ್ದಲ್ಲಿ, ಈ ಯೋಜನೆ ಜಾರಿಯಿಂದ ರಾಜ್ಯಕ್ಕೆ ಆಗಬಹುದಾದ ಪ್ರಯೋಜನಗಳೇನು; | ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು (National Water Development Agency-NWDA) ಪೆನಿನ್ಸುಲಾರ್ ನದಿ ಅಭಿವೃದ್ಧಿ ಯೋಜನೆ (PRD) ಅಡಿಯಲ್ಲಿ ಮಹಾನದಿ-ಗೋದಾವರಿ-ಕೃಷ್ಣಾ-ಕಾವೇರಿ-ಪೆನ್ನಾರ್ ನದಿ ಜೋಡಣೆ ಯೋಜನೆಯನ್ನು ಎರಡು ಹಂತಗಳಲ್ಲಿ ರೂಪಿಸಿದೆ.<br><br>ಮೊದಲನೇ ಹಂತದಲ್ಲಿ ಗೋದಾವರಿ-ಕೃಷ್ಣಾ-ಪೆನ್ನಾರ್-ಕಾವೇರಿ ನದಿ ಜೋಡಣೆ ಯೋಜನೆಯನ್ನು ಹಾಗೂ ಎರಡನೇ ಹಂತದಲ್ಲಿ ಮಹಾನದಿ-ಗೋದಾವರಿ ನದಿ ಜೋಡಣೆ ಮತ್ತು ಕಾವೇರಿ-ವೈಗೈ-ಗುಂಡಾರ್ ಜೋಡಣೆ ಯೋಜನೆಗಳನ್ನು ರೂಪಿಸಿದೆ.<br><br>ಪ್ರಸ್ತುತ, ಮೊದಲನೇ ಹಂತದ ಗೋದಾವರಿ-ಕೃಷ್ಣಾ-ಪೆನ್ನಾರ್-ಕಾವೇರಿ ನದಿ ಜೋಡಣೆ ಯೋಜನೆಯ ವಿವರವಾದ ಯೋಜನಾ ವರದಿಯನ್ನು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ(NWDA)ಯು ದಿನಾಂಕ: 08.01.2024ರಂದು ರಾಜ್ಯಕ್ಕೆ ಕಳುಹಿಸಿದೆ.<br><br>ಸದರಿ ಯೋಜನೆಯಡಿ ಗೋದಾವರಿ ಕಣಿವೆಯಿಂದ ಒಟ್ಟಾರೆ 147.83 TMC ನೀರನ್ನು ತಿರುವುಗೊಳಿಸಲು ಯೋಜಿಸಲಾಗಿದ್ದು, ಕರ್ನಾಟಕ ರಾಜ್ಯಕ್ಕೆ ಕೃಷ್ಣಾ ನದಿ ಕಣಿವೆಯ ಮಲಪ್ರಭಾ ಉಪ ಕಣಿವೆಯಲ್ಲಿ ಕುಡಿಯುವ ನೀರಿಗಾಗಿ 10.24 TMC ಹಾಗೂ ಕೈಗಾರಿಕಾ ಬಳಕೆಗಾಗಿ 5.65 TMC ಒಟ್ಟಾರೆ 15.891 TMC ಬಳಕೆಯನ್ನು ಸೂಚಿಸಲಾಗಿದೆ. ಅದರಂತೆ, ರಾಜ್ಯಕ್ಕೆ ಒಟ್ಟು Consumptive ಬಳಕೆಯು 2.19 TMC ಆಗುತ್ತದೆ. ಸದರಿ ಸೂಚಿಸಲಾಗಿರುವ ಪ್ರಮಾಣಕ್ಕೆ ರಾಜ್ಯವು ಒಪ್ಪಿರುವುದಿಲ್ಲ. |
| ಇ) | ಈ ಯೋಜನೆ ಜಾರಿಗೊಂಡಲ್ಲಿ, ರಾಜ್ಯಕ್ಕೆ ದೊರೆಯುವ ನೀರಿನ ಪ್ರಮಾಣ ಎಷ್ಟು; ಯೋಜನೆಯ ಸಾಧಕ ಬಾಧಕಗಳ ಬಗ್ಗೆ ವಿಸ್ತೃತವಾಗಿ ವರದಿಯನ್ನು ಪಡೆಯಲಾಗಿದೆಯೇ; | |
| ಈ) | ಪಡೆದಿದ್ದಲ್ಲಿ, ರಾಜ್ಯಕ್ಕೆ ಯೋಜನೆಯಿಂದ ಪ್ರಯೋಜನವಾಗಿದೆಯೇ ಅಥವಾ ಇಲ್ಲವೆ; ಈ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

| | | |
|---|---|---|
| | | ನದಿ ಜೋಡಣೆ ವಿಶೇಷ ಸಮಿತಿಯ ಸಭೆಗಳಲ್ಲಿ ಹಾಗೂ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ ಆಡಳಿತ ಮಂಡಳಿಯ ಸಭೆಗಳಲ್ಲಿ ಹಾಗೂ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು ನಡೆಸಿರುವ ಸಮಾಲೋಚನಾ ಸಭೆಗಳಲ್ಲಿ ಗೋದಾವರಿ(ಇಂಚಂಪಲ್ಲಿ/ಜನಂಪೇಟೆ)-ಕಾವೇರಿ(ಗ್ರಾಂಡ್ ಅಣೆಕಟ್ಟು) ನದಿ ಜೋಡಣೆಯ ಯೋಜನಾ ವರದಿಯು ಚರ್ಚೆಯಾಗಿರುತ್ತದೆ.<br><br>ರಾಜ್ಯದಲ್ಲಿ DPAP ಹಾಗೂ DDP Area ಗಳು ಅಧಿಕವಾಗಿರುತ್ತದೆ ಹಾಗೂ ವಿವಿಧ ನ್ಯಾಯಾಧಿಕರಣಗಳಿಂದ ರಾಜ್ಯಕ್ಕೆ ಐತಿಹಾಸಿಕ ಕಾರಣಗಳಿಂದ ಕೋರಿಕೆ ನೀರಿನ ಪ್ರಮಾಣ ಹಂಚಿಕೆಯಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯು (NWDA) ರೂಪಿಸುತ್ತಿರುವ ಗೋದಾವರಿ-ಕಾವೇರಿ ನದಿ ಜೋಡಣೆ ಯೋಜನೆ ಹಾಗೂ ಇನ್ನಿತರೆ ನದಿ ಜೋಡಣೆ ಯೋಜನೆಗಳಲ್ಲಿ ರಾಜ್ಯಕ್ಕೆ ನ್ಯಾಯಸಮ್ಮತ ಪಾಲು ಹಂಚಿಕೆಯಾಗಬೇಕೆಂದು ಒತ್ತಾಯಿಸಲಾಗುತ್ತಿದೆ. ಕರ್ನಾಟಕವು ಸೇರಿದಂತೆ ಇನ್ನಿತರೆ ರಾಜ್ಯಗಳ ಪಾಲಿನ ವಿಷಯವು ಇತ್ಯರ್ಥವಾಗುವವರೆಗೆ ಯೋಜನಾ ವರದಿಗಳನ್ನು ಅಂತಿಮಗೊಳಿಸಬಾರದೆಂದು ಕೇಂದ್ರ ಸರ್ಕಾರವನ್ನು ಹಾಗೂ ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯನ್ನು ಒತ್ತಾಯಿಸಲಾಗುತ್ತಿದೆ. |

**ಸಂಖ್ಯೆ: ಜಸಂಇ 14 ಕೃವಿಇ 2024**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**